# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 309 |
| 2 | ಸದಸ್ಯರ ಹೆಸರು | ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 14.09.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಜಮೀನನ್ನು ಪ್ರಥಮವಾಗಿ ಯಾವಾಗ ಸರ್ವೆ ಮಾಡಲಾಯಿತು ಆಗಿನ ಮೈಸೂರು ಸಂಸ್ಥಾನಕ್ಕೆ ನೇಮಕವಾಗಿದ್ದ ಬ್ರಿಟೀಷ್ ಕಮೀಷನ್ ಯಾರು;</td><td>ರಾಜ್ಯದಲ್ಲಿನ ಎಲ್ಲಾ ಭೂಮಿಯ ಅಳತೆಯನ್ನು ಆಯಾಯ ಪ್ರಾಂತ್ಯಗಳ ಭೌಗೋಳಿಕ ಸ್ಥಿತಿಗನುಗುಣವಾಗಿ ವಿವಿಧ ಕಾಲಘಟ್ಟದಲ್ಲಿ ಈ ಕೆಳಕಂಡಂತೆ ಪ್ರಾಂತ್ಯವಾರು ಮೂಲ ಸರ್ವೆ ಮತ್ತು ರೀಸರ್ವೆ ಕಾರ್ಯವನ್ನು ಪೂರೈಸಲಾಗಿದೆ<br>
<table>
<tr><th>ಕ್ರ. ಸಂ</th><th>ಪ್ರಾಂತ್ಯ</th><th>ಮೂಲ ಸರ್ವೇ</th><th>ರಿ-ಸರ್ವೇ</th></tr>
<tr><td>1</td><td>ಹಳೇ ಮೈಸೂರು ಪ್ರಾಂತ್ಯ</td><td>1863-1899</td><td>1900-1917</td></tr>
<tr><td>2</td><td>ಮುಂಬೈ ಪ್ರಾಂತ್ಯ</td><td>1840-1863</td><td>1906-1921</td></tr>
<tr><td>3</td><td>ಮದರಾಸು ಪ್ರಾಂತ್ಯ</td><td>1863-1904</td><td>1923-1935</td></tr>
<tr><td>4</td><td>ಹೈದರಾಬಾದ್ ಪ್ರಾಂತ್ಯ</td><td>1875-1888</td><td>1906-1916</td></tr>
<tr><td>5</td><td>ಕೊಡಗು ಪ್ರಾಂತ್ಯ</td><td>1806-1816</td><td>1906-1912</td></tr>
</table>
<br>ಮೂಲ ಸರ್ವೆ ಅವಧಿಯಲ್ಲಿ ಆಗಿನ ಮೈಸೂರು ಸಂಸ್ಥಾನದಲ್ಲಿ ಶ್ರೀ ಬೌರಿಂಗ್ ರವರು ಬ್ರಿಟಿಷ್ ಕಮಿಷನರ್ (ಚೀಫ್ ಕಮಿಷನರ್ ) ಆಗಿದ್ದರು.</td></tr>
<tr><td>ಆ)</td><td>ಸರ್ವೆಯಲ್ಲಿ ಬರುವ ದಾಖಲೆಗಳು ಯಾವುವು; ಟಿಪ್ಪಣಿ ಪೋಡಿ ಪಕ್ಕಾ ಬುಕ್ಕಿನ ನಕಲು ಹಾಗೂ ಇತರೆ ದಾಖಲೆಗಳ ಮಹತ್ವವೇನು; (ವಿವರದೊಂದಿಗೆ ಮಾಹಿತಿ ನೀಡುವುದು)</td><td>ಭೂಮಾಪನ ಇಲಾಖೆಯಲ್ಲಿನ ಪ್ರಮುಖ ದಾಖಲೆಗಳು ಮತ್ತು ಅವುಗಳ ವಿವರಣೆ ಈ ಕೆಳಕಂಡಂತಿದೆ.<br>1) ಟಿಪ್ಪಣಿ:- ಮೂಲ/ರೀಸರ್ವೆ ಕಾಲದ ಅಳತೆ ಸಂದರ್ಭ ದಲ್ಲಿ ಸ್ಕೇಲ್ ಪ್ರಮಾಣಕ್ಕನುಗುಣವಾಗಿ ಇಲ್ಲದಿರುವ ಕಚ್ಚಾ ನಕ್ಷೆ ರಚಿಸಿ, ಜಮೀನಿನ ಅಳತೆ, ಕರ್ದಾ, ಖರಾಬು, ಇತ್ಯಾದಿ ವಿವರ ನಮೂದಿಸಿರುವ ದಾಖಲೆ.<br>2) ಪಕ್ಕಾ ಪುಸ್ತಕ:- ಮೂಲ/ರೀಸರ್ವೆ ಕಾಲದ ಅಳತೆ ಸಂದರ್ಭದಲ್ಲಿ ತಯಾರಿಸಿರುವ ಟಿಪ್ಪಣಿಯ ಅಳತೆ ಗಳನ್ನು ಪರಿಶೀಲಿಸಿ ನಿಗದಿತ ಸ್ಕೇಲ್‌ಗೆ ಅನುಗುಣವಾಗಿ ನಕಾಶೆ ತಯಾರಿಸಿ, ವಸಲಾವಾರು ಕ್ಷೇತ್ರದ ಲೆಕ್ಕಾಚಾರ ಮಾಡಿ ಸರ್ವೆ ನಂಬರಿನ ವಿಸ್ತೀರ್ಣ, ಕರ್ದಾ ವಿವರ, ಜಮೀನಿನಲ್ಲಿರುವ ಕಲ್ಲುಗಳ ಸಂಖ್ಯೆ, ಸರ್ಕಾರಿ/ ಖಾಸಗಿ ಇತ್ಯಾದಿ ಮಾಹಿತಿ ದಾಖಲಿಸಿರುವ ಪುಸ್ತಕ.<br>3) ಆಕಾರಬಂದು:- ಒಂದು ಜಮೀನಿನ ಒಟ್ಟು ಕ್ಷೇತ್ರ, ಖರಾಬು, ಬಾಬುವಾರು ವಿಂಗಡಣೆ, ನೀರಿನ ಆಶ್ರಯ, ಕಂದಾಯದ ಲೆಕ್ಕಾಚಾರ ಇತ್ಯಾದಿ ಮಾಹಿತಿ ದಾಖಲಿಸಿರುವ ತಃಖ್ತೆ.</td></tr>
</table>

| | | |
|---|---|---|
| | | 4) **ಅಟ್ಲಾಸ್:**- ಜಮೀನಿನ ಹಿಸ್ಸಾ ನಕಾಶೆಯನ್ನು ಸ್ಕೇಲ್‌ಗೆ ಅನುಗುಣವಾಗಿ ತಯಾರಿಸಿದ ದಾಖಲೆ.<br>5) **ಪ್ರತಿ ಪುಸ್ತಕ:**- ಕಂದಾಯ ನಿಗದಿ ಕುರಿತು ಜಮೀನಿನ ನೆಲ ಪ್ರತಿ ಮಾಡಿ ಭಾಗಾಣೆ, ನೀರಿನ ಆಶ್ರಯ, ಪೋಟ್ ಖರಾಬು ಕರ್ದಾ ವಿವರ, ಇತ್ಯಾದಿ ಮಾಹಿತಿಗಳನ್ನು ನಮೂದಿಸಿರುವ ದಾಖಲೆ.<br>6) **ರೀ-ಕ್ಲಾಸ್ ಪ್ರತಿ:**- ರೀ-ಕ್ಲಾಸಿಫಿಕೇಷನ್ ಸಮಯದಲ್ಲಿ ಸರ್ವೆ ನಂಬರಿನಲ್ಲಿನ ಬೆಳೆ ಮತ್ತು ನೀರಿನ ಮೂಲದ ಅನುಗುಣವಾಗಿ ಭೂಮಿಯ ತರಹೆಯಲ್ಲಿನ ಬದಲಾವಣೆ ಮತ್ತು ಜಮೀನು ಸ್ಥಿತಿಯಂತೆ ಖರಾಬು ಹೆಚ್ಚಿಸಿರುವ ಅಥವಾ ತಗ್ಗಿಸಿ ನಮೂದಿಸಿರುವ ದಾಖಲೆ.<br>7) **ಹಿಸ್ಸಾ ಟಿಪ್ಪಣಿ:**- ಹಿಸ್ಸಾ ಸರ್ವೆ ಕಾಲದಲ್ಲಿ ಜಮೀನಿನಲ್ಲಿ ಇರುವ ಹಿಸ್ಸಾಗಳ ಅಳತೆ ಮಾಡಿ ಸ್ಕೇಲ್ ಪ್ರಮಾಣಕ್ಕೆ ಇಲ್ಲದಂತೆ ಕಚ್ಚಾ ನಕ್ಷೆ ರಚಿಸಿ ಹಿಸ್ಸಾ ವಿಭಾಗಿಸಿ ಅಳತೆ, ಕರ್ದಾ ಖರಾಬು ಹಂಚಿಕೆ ಇತ್ಯಾದಿ ವಿವರಗಳನ್ನು ನಮೂದಿಸಿರುವ ದಾಖಲೆ<br>8) **ಹಿಸ್ಸಾ ಪಕ್ಕಾ ಪುಸ್ತಕ**:-ಹಿಸ್ಸಾ ಸರ್ವೆ ಕಾಲದಲ್ಲಿ ಹಿಸ್ಸಾ ತಯಾರಿಸಿರುವ ಟಿಪ್ಪಣಿಯ ಅಳತೆಗಳನ್ನು ಪರಿಶೀಲಿಸಿ ನಿಗಧಿತ ಸ್ಕೇಲ್ ಅನುಗುಣವಾಗಿ ನಕಾಶೆ ತಯಾರಿಸಿ, ಹಿಸ್ಸಾವಾರು ಕ್ಷೇತ್ರದ ಲೆಕ್ಕಾಚಾರ, ಖರಾಬು, ಬಾಬುವಾರು ವಿಂಗಡಣೆ ಮಾಡಿ ಸರ್ವೆ ನಂಬರಿನ ವಿಸ್ತೀರ್ಣ, ಹಿಸ್ಸಾ ದಾರರ ವಿವರ ಇತ್ಯಾದಿ ಮಾಹಿತಿ ದಾಖಲಿಸಿರುವ ಪುಸ್ತಕ.<br>9) **ಗ್ರಾಮ ನಕಾಶೆ:**- ಸರ್ವೆ ನಂಬರುಗಳ ಬಾಬ್ತು ಮೂಲ/ ರೀಸರ್ವೆ ಸಮಯದಲ್ಲಿ ತಯಾರಿಸಿದ ಟಿಪ್ಪಣಿಗಳನ್ನು ಜಂಟಿಯಾಗಿ ನಿಗದಿತ ಸ್ಕೇಲ್‌ಗೆ ಅನುಗುಣವಾಗಿ ರಚಿಸಿ, ಖರಾಬು ಚಿಹ್ನೆ, ಗ್ರಾಮದ ಲಾಗು ಗ್ರಾಮಗಳ ವಿವರ ಇತ್ಯಾದಿ ವಿವರವನ್ನು ದಾಖಲಿಸಿರುವ ನಕಾಶೆಯಾಗಿ ರುತ್ತದೆ. |
| ಇ) | ಸರ್ವೆ ನಂಬರಿನ ಹಿಸ್ಸಾ ಜಮೀನಿಗೆ ಆ ಗ್ರಾಮದ ಕೊನೆಯ ಸರ್ವೆ ನಂಬರಿನಿಂದ ಮುಂದಿನ ನಂಬರು ನೀಡಲು ಸರ್ಕಾರ ಪ್ರಕ್ರಿಯೆ ನಡೆಸುತ್ತಿದೆಯೇ; | ಸರ್ವೆ ನಂಬರಿನ ಹಿಸ್ಸಾ ಜಮೀನಿಗೆ ಆ ಗ್ರಾಮದ ಕೊನೆ ಸರ್ವೆ ನಂಬರಿನಿಂದ ಮುಂದಿನ ನಂಬರು ನೀಡಲು ಭೂಮಾಪನ ಇಲಾಖೆಯ ಸುತ್ತೋಲೆ ಸಂಖ್ಯೆ:SSLR/193/ 2022-23 ದಿನಾಂಕ: 21-07-2022 ರಲ್ಲಿ ಸೂಚನೆ ನೀಡಲಾಗಿದೆ. |
| ಈ) | ಈ ಅವೈಜ್ಞಾನಿಕ ಕ್ರಮವನ್ನು ಕೈಬಿಟ್ಟು ಹದ್ದುಬಸ್ತು ಕಾರ್ಯಗಳ ಬಗ್ಗೆ ಗಮನಹರಿಸಿ ರೈತರಿಗೆ ಅನುಕೂಲ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು? | |

**ಸಂಖ್ಯೆ: ಕಂಇ 180 ಎಸ್‌ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು